ಸುದ್ದಿ ಸಿಂಚನ

ಶನೈಶ್ಚರಸ್ವಾಮಿಗೆ ಪೂಜೆ

ಮೈಸೂರು: ತಾಲೂಕಿನ ಜಯಪುರ ಹೋಬಳಿಯ ಡಿ. ಸಾಲುಂಡಿ ಗ್ರಾಮದಲ್ಲಿ 3ನೇ ಶ್ರಾವಣ ಮಾಸ ಶನಿವಾರದ ಪ್ರಯುಕ್ತ ಗ್ರಾಮದ ಶನೈಶ್ಚರ ಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಜರುಗಿತು. ಶಾಸಕ ಜಿ.ಡಿ. ಹರೀಶ್ ಗೌಡ ಅವರು ಭಾಗವಹಿಸಿ, ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಶಾಸಕ ಹರೀಶ್ ಗೌಡ ಮತ್ತು ಎಪಿಎಂಸಿ ಮಾಜಿ ನಿರ್ದೇಶಕ ಕೋಟೆಹುಂಡಿ ಮಹದೇವು ಅವರನ್ನು ಗ್ರಾಮಸ್ಥರು ಆತ್ಮೀಯವಾಗಿ ಸನ್ಮಾನಿಸಿದರು. ಶನೈಶ್ಚರ ದೇವಾಲಯ ಪ್ರಧಾನ ಅರ್ಚಕ ಅಂಕಯ್ಯ, ಶನಿಮಹಾತ್ಮ ಸೇವಾ ಟ್ರಸ್ಟ್ ಕಾರ್ಯದರ್ಶಿ ಕೃಷ್ಣಮೂರ್ತಿ, ಧನಗಹಳ್ಳಿ ಗ್ರಾಪಂ ಮಾಜಿ ಸದಸ್ಯ ನೀ. ನಿಂಗರಾಜು, ಗ್ರಾಮದ ಮುಖಂಡರಾದ ಭಾಸ್ಕರ್, ಪ್ರಭಾಕರ್, ರಾಖಿ, ರಂಗಸ್ವಾಮಿ, ಪೈಲ್ವಾನ್ ಸಿದ್ದರಾಜು, ಸಣ್ಣಮುತ್ತೇಗೌಡ, ಸಿದ್ದರಾಮು ಮತ್ತು ಗ್ರಾಮಸ್ಥರು ಇದ್ದರು.

ರೈಲ್ವೆ ಆಸ್ತಿಯ ಕಳ್ಳತನ: ಆರೋಪಿ ಬಂಧನ

ಮೈಸೂರು: ಮೈಸೂರು ವಿಭಾಗದ ರೈಲ್ವೆ ರಕ್ಷಣಾ ಪಡೆ (ಆರ್ ಪಿಎಫ್) ಸಿಬ್ಬಂದಿ ಅಶೋಕಪುರಂ ಯಾರ್ಡ್‌ನಲ್ಲಿ ರೈಲ್ವೆ ಆಸ್ತಿಯ ಕಳ್ಳತನವನ್ನು ಪತ್ತೆಹಚ್ಚಿದ್ದಾರೆ.

ಆ.27ರ ಮಧ್ಯರಾತ್ರಿ ಅಶೋಕಪುರಂ ಯಾರ್ಡ್‌ನಲ್ಲಿ ಕರ್ತವ್ಯದಲ್ಲಿದ್ದ ಪೇದೆ ಮುಜಮ್ಮಿಲ್ ಖಾನ್ ಅವರು ವ್ಯಕ್ತಿಯೊಬ್ಬರು ವಿದ್ಯುತ್ ಮೋಟಾರ್‌ನಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿರುವುದನ್ನು ಗಮನಿಸಿದರು. ತಕ್ಷಣ ಸ್ಥಳಕ್ಕೆ ಆಗಮಿಸಿದ ಆರ್ ಪಿಎಫ್ ತಂಡವು ಆತನನ್ನು ವಶಕ್ಕೆ ಪಡೆದಿದೆ. ಆತನನ್ನು ಬಿಹಾರದ ಆಶಿಶ್ (26) ಎಂಬಾತನೇ ಬಂಧಿತ ಆರೋಪಿ. ಆತನ ಬಳಿಯಿಂದ ಸುಮಾರು ₹4000 ರೂ, ಮೌಲ್ಯದ ವಿದ್ಯುತ್ ಮೋಟಾರ್‌ವಶಪಡಿಸಿಕೊಳ್ಳಲಾಯಿತು.

ಮೊಬೈಲ್ ಪತ್ತೆ

ಮೈಸೂರು ಆ.27 ರಂದು ಚೆನ್ನೈ ಮೈಸೂರು ಎಕ್ಸ್‌ಪ್ರೆಸ್ ರೈಲಿನಲ್ಲಿ ಮೈಸೂರು ನಿಲ್ದಾಣಕ್ಕೆ ಬಂದ ನಂತರ ಪ್ರಯಾಣಿಕರೊಬ್ಬರು ಮೊಬೈಲ್ ಫೋನ್ ಅನ್ನು ರೈಲಿನಲ್ಲಿ ಬಿಟ್ಟುಹೋಗಿರುವ ಬಗ್ಗೆ ಆರ್ ಪಿಎಫ್ ಮಾಹಿತಿ ದೊರೆಯಿತು. ತಕ್ಷಣ ಕಾರ್ಯಪ್ರವೃತ್ತರಾದ ಪೇದೆ ರುದ್ರಮೂರ್ತಿ ಅವರು ಬೋಗಿಯನ್ನು ಪರಿಶೀಲಿಸಿ ಮೊಬೈಲ್ ಫೋನ್ ಅನ್ನು ಪತ್ತೆ ಹಚ್ಚಿದರು. ಎಸ್‌ಐ ಎ.ವಿ. ನಮಿತಾ ಅವರು ಪ್ರಯಾಣಿಕರನ್ನು ಸಂಪರ್ಕಿಸಿ ಮಾಹಿತಿ ನೀಡಿದರು. ಗುರುತು ಪರಿಶೀಲಿಸಿದ ನಂತರ ಚೆನ್ನೈ ನಿವಾಸಿ ಕೆ. ಜಯಲಕ್ಷ್ಮಿ ಅವರಿಗೆ ಮೊಬೈಲ್ ಹಸ್ತಾಂತರಿಸಿದ್ದಾರೆ.

ಕೃಷಿ ಭೂಮಿ ಸ್ವಾಧೀನ ವಿರೋಧಿಸಿ ರೈತರ ಪ್ರತಿಭಟನೆ

ಮಾಜಿ ಸಿಎಂ ಸಿದ್ದರಾಮಯ್ಯ, ಸಚಿವ ಡಾ.ಯತೀಂದ್ರ ಭಾಗಿಯಾದ ಕಾರ್ಯಕ್ರಮದಲ್ಲಿ ದಿಢೀರ್ ಘೋಷಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ತಮ್ಮ ಫಲವತ್ತಾದ ಕೃಷಿ ಭೂಮಿಯನ್ನು ವಿದ್ಯುತ್ ಮಾರ್ಗ ಹಾದುಹೋಗಲೆಂದು ಕೆಐಎಡಿಬಿ ಸ್ವಾಧೀನ ಪಡಿಸಿಕೊಳ್ಳಲು ಮುಂದಾಗಿರುವ ಕ್ರಮ ಕೈಬಿಡಲು ಆಗ್ರಹಿಸಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ಪಾಲ್ಗೊಂಡಿದ್ದ ಕಾರ್ಯಕ್ರಮದಲ್ಲಿ ರೈತರು ದಿಢೀರ್ ಪ್ರತಿಭಟನೆ ನಡೆಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ಕೆಎನ್‌ಎಸ್ ಬಡಾವಣೆಯಲ್ಲಿ ಶನಿವಾರ ಆಯೋಜಿಸಿದ್ದ ಪತ್ರಕರ್ತರ ನೂತನ ಭವನದ ಕಟ್ಟಡ ಕಾಮಗಾರಿಗೆ ಚಾಲನೆ, ಪತ್ರಿಕಾ ದಿನಾಚರಣೆ, ಹಿರಿಯ ಪತ್ರಕರ್ತರಿಗೆ ಅಭಿನಂದನೆ, ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸಿದ್ದರಾಮಯ್ಯ, ಡಾ. ಯತೀಂದ್ರ ಸಿದ್ದರಾಮಯ್ಯ ಆಗಮಿಸುತ್ತಿದ್ದಂತೆ ರೈತರು ದಿಢೀರ್ ಘೋಷಣೆ ಕೂಗಿ, ಭೂ ಸ್ವಾಧೀನ ಕೈಬಿಡುವಂತೆ ಒತ್ತಾಯಿಸಿದರು.

ಸಿದ್ದರಾಮಯ್ಯ ಅವರು ಕೆಲವೇ ನಿಮಿಷಗಳಲ್ಲಿ ಕಾರ್ಯಕ್ರಮದಿಂದ ನಿರ್ಗಮಿಸಿದ ವೇಳೆಯೂ ರೈತರು ಅವರ ಕಾರನ್ನು ಸುತ್ತುವರೆದು ಪ್ರತಿಭಟಿಸಿ ದರು. ಪೊಲೀಸರು ರೈತರನ್ನು ನಿಯಂತ್ರಿಸುವ ಮೂಲಕ ಅವರು ತೆರಳಲು ಅನುವು ಮಾಡಿಕೊಟ್ಟರು.

ನಂತರ ಕಾರ್ಯಕ್ರಮದಲ್ಲಿದ್ದ ಡಾ. ಯತೀಂದ್ರ ಸಿದ್ದರಾಮಯ್ಯ ಅವರಿಗೆ ರೈತರು ಮನವಿ ಸಲ್ಲಿಸಲು ಮುಂದಾದರು. ರೈತರ ಕೋರಿಕೆ ಮೇರೆಗೆ ವೇದಿಕೆಯಿಂದ ಬಂದ ಸಚಿವರಿಗೆ, ರೈತರೊಂದಿಗೆ ಬಿಜೆಪಿ ಮುಖಂಡ ಡಾ. ಶುಶ್ರೂತ್ ಗೌಡ ಎದುರಾಗಿ, ರೈತರಿಗೆ ಆಗಿರುವ ಅನ್ಯಾಯ ಸರಿಪಡಿಸುವಂತೆ ಕೇಳಿದರು. ನೀವ್ಯಾಕೆ ಇಲ್ಲಿಗೆ ಬಂದಿದ್ದೀರಿ ಎಂದು ಡಾ, ಶುಶ್ರೂತ್ ಗೌಡ ಅವರೊಂದಿಗೆ ಡಾ. ಯತೀಂದ್ರ ವಾಗ್ವಾದಕ್ಕೆ ಇಳಿದರು. ಈ ವೇಳೆ ಜೊತೆಗಿದ್ದ ಶಾಸಕರಾದ ಡಿ. ರವಿಶಂಕರ್, ದರ್ಶನ್ ಧ್ರುವನಾರಾಯಣ್ ಅವರು ಡಾ. ಯತೀಂದ್ರ ಅವರನ್ನು ಸಮಾಧಾನಪಡಿಸಿ ವೇದಿಕೆಗೆ ಕರೆದುಕೊಂಡು ಹೋದರು.

ಭೂಸ್ವಾಧೀನಕ್ಕೆ ಬಿಡಲು ಆಗ್ರಹ: ಮಂಡಕಳ್ಳಿ ವಿಮಾನ ನಿಲ್ದಾಣ ಬಳಿಯ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮರಸೆ ಹಾಗೂ ಮದರಗಳ್ಳಿ ತಮ್ಮ 165 ಎಕರೆ ಜಮೀನು ಸ್ವಾಧೀನಕ್ಕೆ ಮುಂದಾಗಿದ್ದಾರೆ. ಇಲ್ಲಿ ಭತ್ತ ಹಾಗೂ ಇನ್ನಿತರ ಬೆಳೆಗಳಲ್ಲದೆ ಸಾಕಷ್ಟು ಸಂಖ್ಯೆಯಲ್ಲಿ ತೆಂಗಿನ ಮರಗಳೂ ಇವೆ. ಹೀಗಾಗಿ, ಇವನ್ನು ಸ್ವಾಧೀನ ಪಡಿಸಿಕೊಂಡಲ್ಲಿ ತಮ್ಮ ಬದುಕು ಅತಂತ್ರವಾಗುತ್ತವೆ. ನಮಗೆ ಪರಿಹಾರ ಬೇಡ, ನಮ್ಮ ಜಮೀನು ನಮಗೇ ಉಳಿಸಿಕೊಡಿ ಎಂದು ಗ್ರಾಮಸ್ಥರು ಹಾಗೂ ರೈತರು ಆಗ್ರಹಿಸಿದರು.

ಸಕಲ ಸರ್ಕಾರಿ ಗೌರವದೊಡನೆ ಪೊಲೀಸ್ ಇನ್‌ಸ್ಪೆಕ್ಟರ್ ಕೆ.ಬಿ. ರವಿ ಅಂತ್ಯಸಂಸ್ಕಾರ

ಮೂರು ಸುತ್ತು ಗುಂಡು ಹಾರಿಸಿ ಗೌರವ.

ಕೆ.ಬಿ. ರವಿ ಅವರ ಕುಟುಂಬದವರಿಗೆ ರಾಷ್ಟ್ರಧ್ವಜ ಹಸ್ತಾಂತರ.

• **ಕನ್ನಡಪ್ರಭ ವಾರ್ತೆ** ಮೈಸೂರು

ಮಧ್ಯಪ್ರದೇಶದಲ್ಲಿ ತನಿಖೆಗೊಂದು ಹೋಗಿದ್ದಾಗ ಅಪಘಾತದಲ್ಲಿ ನಿಧನರಾದ ಪೊಲೀಸ್ ಇನ್‌ಸ್ಪೆಕ್ಟರ್ ಕೆ.ಬಿ. ರವಿ ಅವರ ಅಂತ್ಯ ಸಂಸ್ಕಾರ ಶನಿವಾರ ಸಕಲ ಸರ್ಕಾರಿ ಗೌರವಗಳೊಂದಿಗೆ ಅವರ ಹುಟ್ಟೂರಾದ ಕೊಣಸೂರು ಗ್ರಾಮದಲ್ಲಿ ನೆರವೇರಿತು.

ಹಿರಿಯ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಪೊಲೀಸರು ಮೂರು ಸುತ್ತು ಗುಂಡು ಹಾರಿಸುವ ಮೂಲಕ ಗೌರವ ಸಲ್ಲಿಸಿದರು.

ಬೆಂಗಳೂರು ಸೆನ್ ಡಿಸಿಪಿ ಡಿಸಿಪಿ ಮಹಮ್ಮದ್ ಎಂ.ಎನ್. ಸುಜಿತ, ಎಎಸ್ಪಿ ನಾಗೇಶ್, ಸರ್ಕಲ್ ಇನ್‌ಸ್ಪೆಕ್ಟರ್‌ದೀಪಕ್, ಎಸ್‌ಐ ಅಜಯ್ ಕುಮಾರ್, ರವಿ ಅವರ ಅಪಾರ ಸಂಖ್ಯೆಯಲ್ಲಿ ಸಹೋದ್ಯೋಗಿಗಳು ಇದ್ದರು. ಬಳಿಕ ಕುಟುಂಬಸ್ಥರಿಗೆ ರಾಷ್ಟ್ರಧ್ವಜ ಹಸ್ತರಿಸಲಾಯಿತು. ರವಿ ಅವರು ತಾಯಿ, ಪತ್ನಿ, ಇಬ್ಬರು ಮಕ್ಕಳು, ಮೂವರು ಸಹೋದರರು, ಮೂವರು ಸಹೋದರಿಯರು ಇದ್ದಾರೆ.

ಹಲವಾರು ಗಣ್ಯರು, ವಿವಿಧಮಠಾಧೀಶರು ಮತ್ತು ರಾಜಕೀಯ ಮುಖಂಡರು ಸಂತಾಪ ಸೂಚಿಸಿದರು.

ಆನೆ ವೀಕ್ಷಣೆಗೆ ಟಿಕೆಟ್ ಇಲ್ಲ: ಅರಣ್ಯ ಇಲಾಖೆ

• **ಕನ್ನಡಪ್ರಭ ವಾರ್ತೆ** ಮೈಸೂರು

ದಸರಾ ಆನೆಗಳನ್ನು ವೀಕ್ಷಿಸಲು ಶುಕ್ರವಾರವಷ್ಟೇ ಟಿಕೆಟ್ ವ್ಯವಸ್ಥೆ ಜಾರಿಗೊಳಿಸಿದ್ದ ಅರಣ್ಯ ಇಲಾಖೆಯು, ಶನಿವಾರ ದಸರಾ ಆನೆ ವೀಕ್ಷಣೆಗೆ ಟಿಕೆಟ್ ಇಲ್ಲ ಎಂದು ಸ್ಪಷ್ಟನೆ ನೀಡಿದೆ.

ಇದರಿಂದ ದಸರಾ ಗಜಪಡೆ ಕಾಡಿನಿಂದ ನಾಡಿಗೆ ಬಂದು ಮೈಸೂರು ಅರಮನೆ ಪ್ರವೇಶಿಸಿದ ಮರು ದಿನವೇ ಅರಣ್ಯ ಇಲಾಖೆಯು ಮೈಮೇಲೆ ಎಳೆದುಕೊಂಡಿದ್ದ ವಿವಾದವು ಆರಂಭದಲ್ಲೇ ಅಂತ್ಯಗೊಂಡಿದೆ.

ದಸರಾ ಆನೆಗಳನ್ನು ವೀಕ್ಷಿಸಲು ವಯಸ್ಕರಿಗೆ ₹100 ರೂ., ಮಕ್ಕಳಿಗೆ ₹50 ರೂ. ಟಿಕೆಟ್ ವ್ಯವಸ್ಥೆಯನ್ನು ಜಾರಿಗೆ ತಂದಿತ್ತು. ಈ ವಿಚಾರ ಗೊತ್ತಾಗುತ್ತಿದ್ದಂತೆ ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಅವರು, ಆನೆಗಳ ದರ್ಶನಕ್ಕೆ ಟಿಕೆಟ್ ಬೇಡ, ಉಚಿತ ಪ್ರವೇಶ ಕಲ್ಪಿಸಿ ಎಂದು ಸೂಚಿಸಿದ್ದಾರೆ.

ಇದಾದ ಬೆನ್ನಲೆ ಅರಮನೆ ಆವರಣದಲ್ಲಿ ದಸರಾ ಆನೆಗಳು ಬೀಡುಬಿಟ್ಟಿದ್ದು, ಅರಮನೆ ವೀಕ್ಷಣೆಗೆ ಆಗಮಿಸುವ ಪ್ರವಾಸಿಗರು ಇಚ್ಛಿಸಿದಲ್ಲಿ ದಸರಾ ಆನೆಗಳನ್ನು ವೀಕ್ಷಿಸಲು ಇಲಾಖಾ ವತಿಯಿಂದ ಇ- ಟಿಕೆಟಿಂಗ್ ಸೌಲಭ್ಯವನ್ನು ನೀಡಲಾಗಿರುವುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾಗುತ್ತಿರುವುದು ಕಂಡು ಬಂದಿದ್ದು, ಸದರಿ ವಿಷಯವು ಕೇವಲ ಚಿಂತನಾ ಹಂತದಲ್ಲಿರುವ ವ್ಯವಸ್ಥೆಯಾಗಿತ್ತು.

ಆದರೆ, ಅರಣ್ಯ ಇಲಾಖೆಯಿಂದ ಆನೆಗಳ ವೀಕ್ಷಣೆಗೆ ಟಿಕೆಟ್ ನೀಡುತ್ತಿಲ್ಲ ಎಂದು ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ. ಪ್ರಭುಗೌಡ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಬಿಎಸ್‌ಐ ಮಹಿಳಾ ವಿಭಾಗದಿಂದ ಬುದ್ಧ ವಂದನೆ, ವಿಸರಣ, ಪಂಚಶೀಲ, ಧ್ಯಾನದ ಮೂಲಕ ಶ್ರಾವಣ ಹುಣ್ಣಿಮೆಯನ್ನು ಆಚರಿಸಲಾಯಿತು. ಎಂ.ಸಿ. ಕವಿತಾ, ನಗರ ಪಾಲಿಕೆ ಮಾಜಿ ಸದಸ್ಯರಾದ ಶಾರದಾ ಈಶ್ವರ್, ನಾಗವೇಣಿ, ಭುವನೇಶ್ವರಿ, ಮಹೇಶ್, ಪುಟ್ಟಣ ಸೇರಿ ಅನೇಕರು ಇದ್ದರು.

ಉಚಿತ ಯೋಗ ತರಬೇತಿ ಸರ್ಟಿಫಿಕೇಟ್ ಕೋರ್ಸ್

ಮೈಸೂರು: ಮೈಸೂರು ಯೋಗ ಅಸೋಸಿಯೇಷನ್‌ನಿಂದ ನುರಿತ ಶಿಕ್ಷಕರ ಸಹಯೋಗದೊಂದಿಗೆ ರಾಮಾನುಜ ರಸ್ತೆಯ 12 ಕ್ರಾಸ್‌ನಲ್ಲಿ ಇವರು ನಮೋ ಯೋಗ ಭವನದಲ್ಲಿ ಆ. 31ರ ಸಂಜೆ 6 ರಿಂದ 7ಕ್ಕೆ ಒಂದು ತಿಂಗಳ ಅವಧಿಯ ಉಚಿತ ಯೋಗ ತರ ಬೇತಿ ಸರ್ಟಿಫಿಕೇಟ್ ಕೋರ್ಸ್ ಕಾರ್ಯಾಗಾರ ಏರ್ಪ ಡಿಸಿದೆ. ಮಾಹಿತಿಗಾಗಿ ಮೊ. 944 9886322 ಸಂಪರ್ಕಿಸಬಹುದು.

ಸಿದ್ಧ ಸಮಾಧಿ ಯೋಗ ಶಿಬಿರ

ಮೈಸೂರು: ಕುವೆಂಪು ನಗರದ ಲ್ಲಿರುವ ಆದಿಚುಂಚ ನಗಿರಿಯಲ್ಲಿ ರುವಋಷಿಸಂಸ್ಕೃತಿವಿದ್ಯಾಕೇಂದ್ರ ಟ್ರಸ್ಟ್ ವತಿಯಿಂದ ಋಷಿ ಸಂಸ್ಕೃತಿ ವಿದ್ಯಾಕೇಂದ್ರದಲ್ಲಿ ಪರಿಚಯ ಕಾರ್ಯಕ್ರಮ ಏರ್ಪಡಿಸಿದೆ. ಸೆ. 2ರಂದು 14 ದಿನಗಳ ಸಿದ್ಧ ಸಮಾಧಿ ಯೋಗ ಶಿಬಿರ ಪ್ರಾರಂಭ ವಾಗಲಿದೆ. ಮಾಹಿತಿಗಾಗಿ ಮೊ. 9448458050 ಸಂಪರ್ಕಿಸಬಹುದು.

ಸುಸಜ್ಜಿತ ಪತ್ರಕರ್ತರ ಭವನದ ನಿರ್ಮಾಣಕ್ಕೆ ಎಲ್ಲಾ ರೀತಿಯ ನೆರವು

ಡಾ. ಯತೀಂದ್ರ । ನೂತನ ಭವನ ಕಾಮಗಾರಿಗೆ ಮಾಜಿ ಸಿಎಂ ಸಿದ್ದರಾಮಯ್ಯ ಚಾಲನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ನಗರದ ಕೆಎನ್‌ಎಸ್ ಬಡಾವಣೆಯಲ್ಲಿ ಸುಸಜ್ಜಿತ ಪತ್ರಕರ್ತರ ಭವನ ನಿರ್ಮಾಣಕ್ಕೆ ಎಲ್ಲಾ ರೀತಿಯ ನೆರವು ನೀಡುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಭರವಸೆ ನೀಡಿದರು.

ಶನಿವಾರ ನಡೆದ ಸಮಾರಂಭದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಮಗಾರಿಗೆ ಚಾಲನೆ ನೀಡಿದ ನಂತರ ನಡೆದ ಸಮಾರಂಭದಲ್ಲಿ ಅವರು ಮಾತನಾಡಿದರು. ಪತ್ರಕರ್ತರ ಭವನ ನಿರ್ಮಾಣಕ್ಕೆ ಅನುದಾನ ಮಂಜೂರಾಗಿದ್ದರೂ ಹಣ ಬಿಡುಗಡೆ ಸ್ವಲ್ಪ ವಿಳಂಬವಾಗಿತ್ತು. 3 ಕೋಟಿ ರೂ. ಹೆಚ್ಚಿನ ವೆಚ್ಚದಲ್ಲಿ ಪತ್ರ ಕರ್ತರ ಭವನ ನಿರ್ಮಾಣವಾ ಗುತ್ತಿದ್ದು, ಭವನದ ಕಾಮಗಾರಿ ಶೀಘ್ರ ಪೂರ್ಣ ಗೊಂಡು, ಜಿಲ್ಲೆಯ ಎಲ್ಲ ಪತ್ರಕರ್ತರಿಗೆ ಇದರ ಸದುಪಯೋ ಗವಾಗಲಿ ಎಂದು ಅವರು ಆಶಿಸಿದರು. ಎಸ್.ಟಿ. ರವಿ ಕುಮಾರ್ ಅಧ್ಯಕ್ಷತೆಯಲ್ಲಿ ಸಂಘದ ಹಿಂದಿನ ಆಡಳಿತ ಮಂಡಳಿಯ ಕಾಲಕ್ಕೆ ಈ ನಿವೇಶನ ಮಂಜೂರಾಗಿ, ಶಂಕು ಸ್ಥಾಪನೆ ನೆರವೇರಿಸಲಾಗಿತ್ತು. ಆದರೆ ಸಿದ್ದರಾಮಯ್ಯ ಅವರು ಮೂರು ಕೋಟಿ ರು. ಹಣ ಮಂಜೂರು ಮಾಡಿ, 50 ಲಕ್ಷ ರು. ಹಣ ಬಿಡುಗಡೆ ಮಾಡಿರುವುದರಿಂದ ಈಗ ಕಾಮಗಾರಿಗೆ ಚಾಲನೆ ನೀಡಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘವು ಕೆಎನ್‌ಎಸ್ ಬಡಾವಣೆಯಲ್ಲಿ ಶನಿವಾರ ಆಯೋಜಿಸಿದ್ದ ಸಮಾರಂಭದಲ್ಲಿ ಪತ್ರಕರ್ತರ ಭವನದ ಕಟ್ಟಡ ಕಾಮಗಾರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿ ಶುಭ ಹಾರೈಸಿದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕ ಜಿ.ಟಿ..ದೇವೇಗೌಡ, ಸಂಘದ ಅಧ್ಯಕ್ಷ ಕೆ. ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ಮೊದಲಾದವರು ಇದ್ದರು.

ಸಿದ್ದರಾಮಯ್ಯ ಅವರ ಕಚೇರಿ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ವಿಧಾನ ಪರಿಷತ್ ಸದಸ್ಯ ಕೆ. ಶಿವಕುಮಾರ್ ಅವರ ಕಚೇರಿಯನ್ನು ನಗರದ ಜಲದರ್ಶಿನಿ ಅತಿಥಿಗೃಹ ಆವರಣದಲ್ಲಿ ತೆರೆಯಲಾಗಿದ್ದು,

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಉದ್ಘಾಟಿಸಿದರು. ಶಾಸಕರಾದ ಕೆ. ಹರೀಶ್ ಗೌಡ, ಡಿ. ರವಿಶಂಕರ್, ದರ್ಶನ್ ಧ್ರುವನಾರಾಯಣ, ಎಚ್.ಎಂ.ಗಣೇಶಪ್ರಸಾದ್, ಮಾಜಿ ಶಾಸಕ ಎಚ್.ಪಿ. ಮಂಜುನಾಥ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ. ವಿಜಯಕುಮಾರ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ. ರಾಮು, ಮಾಜಿ ಮೇಯರ್ ಪುರುಷೋತ್ತಮ್ ಸೇರಿದಂತೆ ಹಲವಾರು ಗಣ್ಯರು ಭಾಗವಹಿಸಿ, ಶುಭ ಕೋರಿದರು.

ಜಲದರ್ಶಿನಿ ಅತಿಥಿಗೃಹದಲ್ಲಿ ಎಂಎಲ್ಸಿ ಕೆ. ಶಿವಕುಮಾರ್ ಕಚೇರಿ ಉದ್ಘಾಟನೆ

ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಅವರು ಶನಿವಾರ ಸುತ್ತೂರು ಮಠದ ಡಾ.ರಾಜೇಂದ್ರ ಶ್ರೀಗಳ ಜಯಂತಿ ಮಹೋತ್ಸವ ವೇಳೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳಿಂದ ಆಶೀರ್ವಾದ ಪಡೆದರು.

ನಾಲ ವಸೂಲಾತಿ ನ್ಯಾಯಾಧಿಕರಣ-II, ಬೆಂಗಳೂರು
ಐಎಸ್‌ಎಸ್‌ಎಲ್ ಜಿಲ್ಲಿಂಗ್, 4ನೇ ಮಹಡಿ, ಟೆಲಿಫೋನ್ ಹೌಸ್, ರಾಜಭವನ್ ರಸ್ತೆ, ಬೆಂಗಳೂರು-560001
ಪ್ರ. ಎಸ.2763/2025
ನಡುವೆ : ಬ್ಯಾಂಕ್ ಆಫ್ ಬರೋಡ, ಜೆಪಿ ನಗರ ಶಾಖೆ, ನಾಚಸಹಳ್ಳಿ ಪಾಳ್ಯ, ಮೈಸೂರು-570 008 ...ಅರ್ಜಿದಾರರು
ಮತ್ತು : ಮಿಸ್ ವೈಷ್ಣವಿ ಲಾಜಿಸ್ಟಿಕ್ಸ್ ಮತ್ತು ಮತ್ತೊಬ್ಬರು ...ಪ್ರತಿವಾದಿ
ನಾಲ ವಸೂಲಾತಿ ನ್ಯಾಯಾಧಿಕರಣ ನಿಯಮ (ಕ್ರಮ) 1993 ರ ನಿಯಮ 23 (VIII) ಅಡಿಯಲ್ಲಿ ನೀಡಲಾಗಿರುವ ಸಮನ್ಸ್
ಅರ್ಜಿದಾರರು, 1993ರ ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳ ಬಾಕಿ ಸಾಲ ವಸೂಲಾತಿ ಕಾಯ್ದೆಯ ಯು/ಎಸ್ 19ರ ಅಡಿಯಲ್ಲಿ ರೂ. 54,70,391/- ರಂತೆ ಅರ್ಜಿಯಲ್ಲಿ ಹೇಳಲಾದ ಪರಿಹಾರ ಹಾಗೂ ಇತರೆ ವೆಚ್ಚಗಳು ಬಾಕಿ ವಸೂಲಾತಿಗಾಗಿ ಅರ್ಜಿ ಸಲ್ಲಿಸಲಾಗಿದೆ.
ನೀವು ಈ ನೋಟಿಸು ಪ್ರಕಟವಾದ ದಿನದಿಂದ 30 ದಿನಗಳ ಮುಂಚಿತವಾಗಿ ಅಥವಾ ದಿನಾಂಕ 30.09.2026 ರಂದು 10.30ಕ್ಕೆ ನೀವಾಗಲಿ ಅಥವಾ ನಿಮ್ಮ ವಕೀಲರ ಜೊತೆಗೆ ನ್ಯಾಯಾಧಿಕರಣದ ಎದುರು ಹಾಜರಿಯೊಂದಿಗೆ ಲಿಖಿತ ಹೇಳಿಕೆ ಮತ್ತು ಕಾರಣವನ್ನು ನೀಡಬೇಕಾಗಿ ಈ ಮೂಲಕ ತಿಳಿಸುತ್ತೇವೆ. ಮೇಲ್ಕಂಡ ದಿನಾಂಕದಂದು ಹಾಜರಾಗಲು ವಿಫಲವಾದಲ್ಲಿ ಸದರಿ ದಾವೆಯನ್ನು ನಿಮ್ಮ ಅನುಪಸ್ಥಿತಿಯಲ್ಲಿ ಆಲಿಸಿ ನಿರ್ಧಾರವನ್ನು ತೀರ್ಮಾನಿಸಲಾಗುವುದು.
ದಿನಾಂಕ: 28-08-2026 ರಂದು ನನ್ನ ಸಹಿ ಮತ್ತು ನ್ಯಾಯಮಂಡಳಿ ಮೊಹರಿನೊಂದಿಗೆ ನೀಡಲಾಗಿದ
ನ್ಯಾಯಾಲಯದ ಆದೇಶದ ಮೇರೆಗೆ, ರಿಜಿಸ್ಟ್ರಾರ್, ನಾಲ ವಸೂಲಾತಿ ನ